## 2016 ಕ.ತೀ.ವ 1687

### (ಕಲಬುರಗಿ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೆ ಗೌಡ

### ಶಾಖಾ ವ್ಯವಸ್ಥಾಪಕರು, ನ್ಯಾಷನಲ್ ವಿಮಾ ಕಂಪನಿ ನಿಯಮಿತ ಬೆಂಗಳೂರು –ವಿರುದ್ಧ– ಸುರೇಶ ಹಾಗೂ ಮತ್ತೊಬ್ಬರು*

ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ 30(1)ನೇ ಪ್ರಕರಣದ ಅಡಿಯಲ್ಲಿ ಈ ಮೊದಲ ಸಂಕೀರ್ಣ ಅಪೀಲನ್ನು ಹೂಡಲಾಗಿದೆ.

ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು, ಮುಖ್ಯವಾಗಿ ಅಧಿಕಾರ ವ್ಯಾಪ್ತಿಯ ಆಧಾರದ ಮೇಲೆ ಕಾರ್ಮಿಕರ ನಷ್ಟಪರಿಹಾರ ಆಯುಕ್ತರು, ರಾಯಚೂರು ಜಿಲ್ಲೆ, ರಾಯಚೂರು ಇವರು ನೀಡಿದ ತೀರ್ಪು ಮತ್ತು ಹೊರಡಿಸಿದ ಐತೀರ್ಪನ್ನು ಪ್ರಶ್ನಿಸಿ ಲಾರಿಯ ವಿಮಾಗಾರರು ಈ ಅಪೀಲುಗಳನ್ನು ಹೂಡಿದ್ದಾರೆ.

ಆಯುಕ್ತರು, ರಾಯಚೂರು ಇವರು, ಕ್ಲೇಮುದಾರರ ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಅಪಘಾತ ನಡೆದ ಅಧಿಕಾರ ವ್ಯಾಪ್ತಿ ಹೊಂದಿರುವ ಚಿತ್ರದುರ್ಗದ ಆಯುಕ್ತರಿಗೆ ಕೇಂದ್ರ ಸರ್ಕಾರ ಹಾಗೂ ಅಧಿನಿಯಮದ 21(1)ನೇ ಪ್ರಕರಣದ ಮೊದಲನೇ ಪರಂತುಕದ ಅಡಿಯಲ್ಲಿ ಉದ್ದೇಶಿಸಲಾದಂತೆ ರಾಜ್ಯ ಸರ್ಕಾರಕ್ಕೆ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ನೋಟೀಸನ್ನು ಹೊರಡಿಸಿದ್ದರೇ ಎಂಬುದಕ್ಕೆ ಸಂಬಂಧಿಸಿದಂತೆ ಪ್ರಶ್ನಿತ ತೀರ್ಪಿನಿಂದ ಏನೂ ಕಂಡು ಬರುವುದಿಲ್ಲ. ಆದ ಕಾರಣದಿಂದ ಯಾರ ಅಧಿಕಾರ ವ್ಯಾಪ್ತಿಯೊಳಗೆ ಅಪಘಾತ ನಡೆದಿದೆಯೋ ಆ ಆಯುಕ್ತರು ಮೊದಲನೆಯದಾಗಿ ಕ್ಲೇಮು ಅರ್ಜಿಯನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿಯನ್ನು ಉಳ್ಳವರಾಗಿರುತ್ತಾರೆ.

*ಮೊದಲ ಸಂಕೀರ್ಣ ಅಪೀಲು ಸಂಖ್ಯೆ: 9805/2007, ಇದರೊಂದಿಗೆ ಇತರೆ, ದಿನಾಂಕ: 25ನೇ ಆಗಸ್ಟ್, 2015.

**ಅಪೀಲುಗಳನ್ನು ಪುರಸ್ಕರಿಸಲಾಗಿದೆ. ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು ರಾಯಚೂರು ಜಿಲ್ಲೆ, ರಾಯಚೂರು ಇವರು ಡಬ್ಲ್ಯೂ.ಸಿ. ನಂ. 120/2006, 118/2006, 119/2006 ಮತ್ತು 121/2006ರಲ್ಲಿ ಹೊರಡಿಸಲಾದ ದಿನಾಂಕ 15.03.2007ರ ತೀರ್ಪು ಮತ್ತು ಐತೀರ್ಪುಗಳನ್ನು ತಳ್ಳಿಹಾಕಲಾಗಿದೆ.**

**ಠೇವಣಿ ಮೊತ್ತವನ್ನು ಅಪೀಲುದಾರರಿಗೆ ಮರುಪಾವತಿಸಲು ಆದೇಶಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. ಸಿವಿಲ್ ಅಪೀಲು ಸಂಖ್ಯೆ 4548/2007, ದಿನಾಂಕ 26–9–2007 ಮೋರ್ಗಿನಾ ಬೇಗಂ –ವಿರುದ್ಧ– ಎಂಡಿ. ಹನುಮಾನ್ ಪ್ಲಾಂಟೇಶನ್ ಲಿಮಿಟೆಡ್ (ಉಲ್ಲೇ) 10*

ಅಪೀಲುದಾರರ ಪರ: ಶ್ರೀಮತಿ ಪ್ರೀತಿ ಪಾಟೀಲ್, ವಕೀಲರು.
ಪ್ರತ್ಯಪೀಲುದಾರರ ಪರ: ಶ್ರೀ ಪ್ರಕಾಶ್ ಏಲಿ, ವಕೀಲರು.
2ನೇ ಪ್ರತ್ಯಪೀಲುದಾರರಿಗೆ ಜಾರಿ ಮಾಡಲಾಗಿದೆ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇ ಗೌಡ :**

ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು, ಮುಖ್ಯವಾಗಿ ಅಧಿಕಾರ ವ್ಯಾಪ್ತಿಯ ಆಧಾರದ ಮೇಲೆ ಕಾರ್ಮಿಕರ ನಷ್ಟಪರಿಹಾರ ಆಯುಕ್ತರು, ರಾಯಚೂರು ಜಿಲ್ಲೆ, ರಾಯಚೂರು ಇವರು ನೀಡಿದ ತೀರ್ಪು ಮತ್ತು ಹೊರಡಿಸಿದ ಐತೀರ್ಪನ್ನು ಪ್ರಶ್ನಿಸಿ ಲಾರಿಯ ವಿಮಾಗಾರರು ಈ ಅಪೀಲುಗಳನ್ನು ಹೂಡಿದ್ದಾರೆ.

2. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಸಮ್ಮತಿಯೊಂದಿಗೆ, ಕಾರ್ಮಿಕರ ನಷ್ಟಪರಿಹಾರ ಆಯುಕ್ತರು, ರಾಯಚೂರು ಜಿಲ್ಲೆ, ರಾಯಚೂರು

(ಸಂಕ್ಷಿಪ್ತತೆಗಾಗಿ ನಂತರ 'ಆಯುಕ್ತರು, ರಾಯಚೂರು' ಎಂದು ಉಲ್ಲೇಖಿಸಲಾಗಿದೆ) ಇವರು ನೀಡಿದ ಸಾಮಾನ್ಯ ತೀರ್ಪಿನಿಂದಾಗಿ ಎಲ್ಲಾ ಅಪೀಲುಗಳನ್ನು ಹೂಡಿರುವುದರಿಂದ ಅವುಗಳನ್ನು ಒಟ್ಟಿಗೆ ಸುನಾವಣೆ ಮಾಡಲಾಗಿದೆ ಮತ್ತು ಈ ಮುಂದಿನ ಕಾನೂನಿನ ಪ್ರಶ್ನೆಗಳನ್ನು ಪರಿಗಣನೆಗಾಗಿ ಒಪ್ಪಿಕೊಳ್ಳಲಾಗಿದೆ ಮತ್ತು ಸಾಮಾನ್ಯ ತೀರ್ಪನ್ನು ಇತ್ಯರ್ಥಪಡಿಸಲಾಗಿದೆ:

i) ರಾಯಚೂರಿನ ಆಯುಕ್ತರು, ಕ್ಲೇಮುದಾರರು ಸಲ್ಲಿಸಿದ ಕ್ಲೇಮು ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದಾರೆಯೇ?

ii) ಆಯುಕ್ತರು, ರಾಯಚೂರು ಜಿಲ್ಲೆ ಇವರು, ಯಾರ ಅಧಿಕಾರ ವ್ಯಾಪ್ತಿಯಲ್ಲಿ ಅಪಘಾತ ನಡೆದಿದೆಯೋ ಆ ವ್ಯಾಪ್ತಿಯೊಳಗೆ ಕೇಂದ್ರ ಸರ್ಕಾರವು ಆಯುಕ್ತರು ಚಿತ್ರದುರ್ಗ ಇವರಿಗೆ ನಿಯಮಿಸಿದ ರೀತಿಯಲ್ಲಿ ಮತ್ತು ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಕಾರ್ಮಿಕರ/ ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ 21(1)ನೇ ಪ್ರಕರಣದ ಮೊದಲ ಪರಂತುಕದ ಅಡಿಯಲ್ಲಿ ಪರಿಭಾವಿಸಲಾದಂತೆ ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ನೋಟೀಸನ್ನು ನೀಡಿದ್ದರೇ?

iii) ಹೊಣೆಗಾರಿಕೆ ಮೇಲೆ ಕ್ಲೇಮುದಾರರಿಗೆ ನೀಡಿದ ನಷ್ಟಪರಿಹಾರವನ್ನು ಸಂದಾಯ ಮಾಡಲು ಅಪೀಲುದಾರ/ ವಿಮಾಗಾರನಿಗೆ ನಿರ್ದೇಶಿಸಿ, ತೆಗೆದುಕೊಂಡ ನಿರ್ಣಯವು ಕಾನೂನಿನಲ್ಲಿ ಸಮರ್ಥನೀಯವಾಗಿದೆಯೇ?

iv) ರಾಯಚೂರಿನ ಆಯುಕ್ತರು ನೀಡಿದ ನಷ್ಟಪರಿಹಾರ ಮತ್ತು ಬಡ್ಡಿಯ ಪ್ರಮಾಣವು, ಕಾರ್ಮಿಕರ /ಕೆಲಸಗಾರರ ನಷ್ಟಪರಿಹಾರ

ಅಧಿನಿಯಮ, 1923ರ ಉಪಬಂಧಗಳಿಗೆ
ಅನುಸಾರವಾಗಿದೆಯೇ?

3. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀಮತಿ ಪ್ರೀತಿ ಪಾಟೀಲ್‌ರವರು, ಲಾರಿಯ ವಿಮಾಗಾರರು ತಮ್ಮ ಆಕ್ಷೇಪಣಾ ವಿವರಣೆ ಸಲ್ಲಿಸುತ್ತಿರುವಾಗಲೇ, ನಿರ್ದಿಷ್ಟವಾಗಿ ಕ್ಲೇಮುದಾರರು ರಾಯಚೂರಿನ ಆಯುಕ್ತರ ಮುಂದಿಟ್ಟಿರುವ ಕ್ಲೇಮು ಅರ್ಜಿಗಳು ಅಧಿಕಾರ ವ್ಯಾಪಿಯು ಇಲ್ಲದಿರುವುದರಿಂದ ಊರ್ಜಿತಯೋಗ್ಯವಲ್ಲವೆಂದು ವಾದಿಸಿದ್ದರೂ ಕೂಡ, ಕಾರ್ಮಿಕರ/ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ಅಧಿನಿಯಮ'ವೆಂದು ಉಲ್ಲೇಖಿಸಲಾಗಿದೆ) 21ನೇ ಪ್ರಕರಣದ ಮೇರೆಗೆ ಪರಿಭಾವಿಸಲಾದಂತೆ, ಆಯುಕ್ತರು, ರಾಯಚೂರು ಇವರು, ವಿವಾದವನ್ನು ರೂಪಿಸದೆ, ಅದನ್ನು ಜಾರಿಗೊಳಿಸುವ ನಿರ್ಣಯ ನೀಡುವಷ್ಟರ ಮಟ್ಟಿಗೆ ಕ್ಲೇಮು ಅರ್ಜಿಗಳನ್ನು ಸ್ವೀಕರಿಸಿ ನಷ್ಟಪರಿಹಾರ ನೀಡುವಲ್ಲಿ ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ.

4. ಅವರು, ರಾಯಚೂರಿನ ಆಯುಕ್ತರು ಹೊಣೆಗಾರಿಕೆ ಮೇಲೆ ಅಪೀಲುದಾರನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡಲು ಸೂಚಿಸಿರುವ ನಿರ್ಣಯ ತೆಗೆದುಕೊಂಡಿರುವುದನ್ನು ಕಾನೂನಿನಲ್ಲಿ ಸಮರ್ಥಿಸಲಾಗುವುದಿಲ್ಲವೆಂದು ನಿವೇದಿಸಿದ್ದಾರೆ.

5. ಅವರು, ಪರ್ಯಾಯವಾಗಿ, ಗಳಿಕೆ ಸಾಮರ್ಥ್ಯದ ನಷ್ಟವನ್ನು ಲೆಕ್ಕಹಾಕುವ ಸಂಬಂಧದಲ್ಲಿ ಆಯುಕ್ತರು ಮಾಡಿದ ನ್ಯೂನತೆಯು ಅಧಿನಿಯಮದ 4(1)(ಸಿ)(ii)ನೇ ಪ್ರಕರಣಕ್ಕೆ ವಿರುದ್ಧವಾಗಿದೆಯೆಂದು ನಿವೇದಿಸಿದ್ದಾರೆ. ತತ್ಪರಿಣಾಮವಾಗಿ, ಆಯುಕ್ತರು ನೀಡಿದ ನಷ್ಟಪರಿಹಾರದ ಪ್ರಮಾಣ ಅತೀ ಹೆಚ್ಚಾಗಿದೆ. ಆದುದರಿಂದ ಇವರು, ಕೋರಲಾದಂತೆ ವಿಮಾಗಾರರು ಸಲ್ಲಿಸಿದ ಅಪೀಲುಗಳನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾರೆ.

6. ಮತ್ತೊಂದು ಕಡೆ, ಎದುರುದಾರರು–ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಪ್ರಕಾಶ್ ಯೇಲಿಯವರು, ಕ್ಲೇಮುದಾರರು, ಕ್ಲೇಮು

ಅರ್ಜಿಗಳ ವ್ಯಾಜ್ಯ ಶೀರ್ಷಿಕೆಯಲ್ಲಿ ಅವರು ನೀಡಿದ ವಿಳಾಸದ ನಿವಾಸಿಗಳಾಗಿದ್ದು, ಇದು ರಾಯಚೂರು ಜಿಲ್ಲೆಯಲ್ಲಿ ಬರುತ್ತದೆ ಮತ್ತು ಅವರು ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಸಾಮಾನ್ಯವಾಗಿ ನಿವಾಸಿಗಳಾಗಿದ್ದಾರೆ ಮತ್ತು ಇದರಿಂದ ರಾಯಚೂರಿನ ಆಯುಕ್ತರು, ಅವರ ಕ್ಲೇಮು ಅರ್ಜಿಗಳನ್ನು ಸ್ವೀಕರಿಸಿರುವುದನ್ನು ಮತ್ತು ನಷ್ಟ ಪರಿಹಾರವನ್ನು ನೀಡಿರುವುದು ಸಮರ್ಥನೀಯವಾಗಿದೆಯೆಂದು ನಿವೇದಿಸಿದ್ದಾರೆ. ಇವರು, ಲಾರಿ ಮಾಲೀಕನು ತನ್ನ ಆಕ್ಷೇಪಣಾ ಹೇಳಿಕೆಯಲ್ಲಿ, ಕ್ಲೇಮುದಾರರಾದ ಸುರೇಂದ್ರ ಕುಮಾರ್ ಮತ್ತು ಸುರೇಶ್, ದುರ್ಗೇಶ್ ಹಾಗೂ ಅನಿಲ್ ಬಾಬು ಅನುಕ್ರಮವಾಗಿ ಚಾಲಕರಾಗಿ ಮತ್ತು ಭರ್ತಿದಾರರಾಗಿ ತನ್ನ ಬಳಿ ಕೆಲಸ ಮಾಡುತ್ತಿದ್ದರೆಂದು ಒಪ್ಪಿಕೊಂಡಿದ್ದಾರೆ ಹಾಗೂ ಆ ವೇಳೆ ಎದುರಿನಿಂದ ಬಂದಿರುವ ಲಾರಿಯ ಚಾಲಕನ ಅತ್ಯಾತುರ ಮತ್ತು ನಿರ್ಲಕ್ಷ್ಯದ ಚಾಲನೆಯಿಂದಾಗಿ ಲಾರಿ ಅಪಘಾತಕ್ಕೊಳಗಾಗಿದ್ದು ಕೆಲಸದ ವೇಲಿನ ಮತ್ತು ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ ಅವರು ಗಾಯಗೊಂಡಿದ್ದಾರೆಂದು ನಿವೇದಿಸಿದ್ದಾರೆ. ಇವರು, ಕ್ಲೇಮುದಾರರಿಗೆ ಅತೀವ ಗಾಯಗಳಾಗಿದ್ದು, ವೈದ್ಯರು, 1, 2 ಮತ್ತು 4ನೇ ಕ್ಲೇಮುದಾರರು ಎಂದರೆ ಸುರೇಂದ್ರ ಕುಮಾರ್, ದುರ್ಗೇಶ್ ಮತ್ತು ಅನಿಲ್‌ಬಾಬು ಪ್ರತಿಯೊಬ್ಬರಿಗೂ ಶೇಕಡಾ 65ರಷ್ಟು ಅಸಮರ್ಥತೆಯಾಗಿದೆಯೆಂದು ಹಾಗೂ ಕ್ಲೇಮುದಾರ ಸಂ.3 ಸುರೇಶ್ ಇವರಿಗೆ ಶೇಕಡಾ 60ರಷ್ಟು ಅಸಮರ್ಥತೆ ಉಂಟಾಗಿದೆಯೆಂದು ತಿಳಿಸಿರುವರೆಂದು ನಿವೇದಿಸಿದ್ದಾರೆ. ರಾಯಚೂರಿನ ಆಯುಕ್ತರು, ಗಳಿಕೆ ಸಾಮರ್ಥ್ಯದ ನಷ್ಟವನ್ನು ಲೆಕ್ಕ ಹಾಕುವಾಗ ಸದರಿ ಅಸಮರ್ಥತೆಯನ್ನು ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಂಡು ನಷ್ಟ ಪರಿಹಾರವನ್ನು ನೀಡಿದ್ದಾರೆಂದು ನಿವೇದಿಸಿದ್ದಾರೆ. ಹಾಗೆಯೇ, ಆಯುಕ್ತರು, ರಾಯಚೂರು ಇವರು ನೀಡಿದ ತೀರ್ಪು ಮತ್ತು ನಷ್ಟಪರಿಹಾರ ನೀಡಿಕೆಯಲ್ಲಿ ಯಾವುದೇ ಅದೃಢತೆ ಮತ್ತು ನ್ಯಾಯ ಬಾಹಿರತೆಯಿಲ್ಲವೆಂದು, ಈ ನ್ಯಾಯಾಲಯದ ಹಸ್ತಕ್ಷೇಪವು ಅನಗತ್ಯವಾಗಿರುವುದರಿಂದ ಅಪೀಲನ್ನು ವಜಾಗೊಳಿಸಬೇಕೆಂದು ಇವರು ಕೋರಿಕೊಂಡಿದ್ದಾರೆ.

7. ರಾಯಚೂರಿನ ಆಯುಕ್ತರು ಕ್ಲೇಮು ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿ ಹೊಂದಿದ್ದರೇ ಅಥವಾ ಇಲ್ಲವೇ ಎಂಬ ಬಗ್ಗೆ ಪಕ್ಷಕಾರರ ಎದುರು

ವಾದಗಳನ್ನು ಮೌಲ್ಯಮಾಪನ ಮಾಡುವ ಸಲುವಾಗಿ, ಅಧಿನಿಯಮದ 21ನೇ ಪ್ರಕರಣದ ಉಪಬಂಧಗಳನ್ನು ಪರಾಮರ್ಶಿಸುವುದು ಅಗತ್ಯವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

**''21. ವ್ಯವಹರಣೆಗಳ ಸ್ಥಳ ಮತ್ತು ವರ್ಗಾವಣೆ:–**

(1) ಈ ಅಧಿನಿಯಮದ ಮೇರೆಗಿನ ಯಾವುದೇ ವಿಷಯವನ್ನು, ಆಯುಕ್ತರು ಅಥವಾ ಅವರ ಮುಂದೆ ಮಾಡಬೇಕಾಗಿದ್ದಲ್ಲಿ, ಅದು, ಈ ಅಧಿನಿಯಮದ ಉಪಬಂಧಗಳಿಗೆ ಹಾಗೂ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳಿಗೆ ಒಳಪಟ್ಟಿರತಕ್ಕದ್ದು, ಯಾವ ಪ್ರದೇಶದಲ್ಲಿ–

(ಎ) ಅಪಘಾತ ನಡೆದು, ಅದರಿಂದ ಗಾಯಗಳಾಗಿವೆಯೋ ಆ ಪ್ರದೇಶ, ಅಥವಾ

(ಬಿ) ಕಾರ್ಮಿಕ ಅಥವಾ ಅವನು ಮೃತನಾಗಿದ್ದ ಪಕ್ಷದಲ್ಲಿ, ನಷ್ಟಪರಿಹಾರವನ್ನು ಕ್ಲೇಮು ಮಾಡಿರುವ ಅವಲಂಬಿತ ಸಾಮಾನ್ಯವಾಗಿ ವಾಸಿಸುವ ಪ್ರದೇಶ ಅಥವಾ;

(ಸಿ) ಉದ್ಯೋಗದಾತನು ನೋಂದಾಯಿತ ಕಚೇರಿಯನ್ನು ಹೊಂದಿರುವ ಪ್ರದೇಶದ ಆಯುಕ್ತನು ಅಥವಾ ಅವರ ಮುಂದೆ ಮಾಡಿರುವುದು;

ಪರಂತು, ಯಾವ ಸ್ಥಳದಲ್ಲಿ ಅಪಘಾತ ನಡೆದಿದೆಯೋ ಆ ಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿರುವ ಆಯುಕ್ತರನ್ನು ಹೊರತುಪಡಿಸಿದ ಆಯುಕ್ತರ ಮುಂದೆ ಅಥವಾ ಮೂಲಕ, ಆ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕೇಂದ್ರ ಸರ್ಕಾರದ ಆಯುಕ್ತರು

ಹಾಗೂ ಸಂಬಂಧಪಟ್ಟ ರಾಜ್ಯ ಸರ್ಕಾರ ನಿಯಮಿಸಲಾದ ರೀತಿಯಲ್ಲಿ ಅವನಿಗೆ ನೋಟೀಸನ್ನು ನೀಡದೆ, ವಿಷಯವನ್ನು ಪರಿಶೀಲಿಸತಕ್ಕದ್ದಲ್ಲ:"

8. ಮೇಲೆ ಹೇಳಲಾದ ಕಾನೂನಿನ ಉಪಬಂಧಗಳ ಪ್ರಕಾರ, ಕ್ಲೇಮುದಾರರು ತಮ್ಮ ಕ್ಲೇಮು ಅರ್ಜಿಗಳನ್ನು ನಿರ್ವಹಿಸಲು ರಾಯಚೂರಿನ ಆಯುಕ್ತರ ಮುಂದೆ ಈ ಮುಂದಿನ ಸಾಧ್ಯತೆಗಳಲ್ಲಿ ಯಾವುದಾದರೂ ಒಂದನ್ನು ಒದಗಿಸಬೇಕು:-

1) ಯಾವ ಅಪಘಾತದಲ್ಲಿ ಅವರಿಗೆ ಗಾಯಗಳಾದವೋ ಆ ಅಪಘಾತದ ಸ್ಥಳವು ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶವಾಗಿದೆಯೆ ; ಅಥವಾ

2) ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಸಾಮಾನ್ಯವಾಗಿ ಅವರು ವಾಸಿಗಳಾಗಿದ್ದಾರೆಯೆ;

3) ರಾಯಚೂರಿನ ಆಯುಕ್ತರ ಅಧಿಕಾರವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಅವರ ಉದ್ಯೋಗದಾತನು ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವುದು.

9. ಒಪ್ಪಿಕೊಳ್ಳಲಾದ ಹಾಗೆ, ಅಪಘಾತವು ಚಿತ್ರದುರ್ಗ ಜಿಲ್ಲೆಯಲ್ಲಿರುವ ಕುಂಚಗಾನಹಳ್ಳಿ ಗ್ರಾಮದಲ್ಲಿ ನಡೆದಿದ್ದು, ಚಿತ್ರದುರ್ಗದ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿದೆ. ಆದುದರಿಂದ ಕ್ಲೇಮುದಾರರು, ರಾಯಚೂರಿನ ಆಯುಕ್ತರ ಅಧಿಕಾರವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಅವರು ಸಾಮಾನ್ಯವಾಗಿ ವಾಸಿಸುವುದನ್ನಾಗಲಿ ಅಥವಾ ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ತಮ್ಮ ಉದ್ಯೋಗದಾತ ನೋಂದಾಯಿತ ಕಚೇರಿಯನ್ನು ಹೊಂದಿದ್ದನು ಎಂಬುದನ್ನಾಗಲಿ ತೋರಿಸಬೇಕು. ಕ್ಲೇಮುದಾರರು, ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಅವರು ಸಾಮಾನ್ಯವಾಗಿ ವಾಸಿಸುತ್ತಿದ್ದರು ಅಥವಾ ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ

ಬರುವ ಪ್ರದೇಶದಲ್ಲಿ ತಮ್ಮ ಉದ್ಯೋಗದಾತ ಕಚೇರಿಯನ್ನು ನೋಂದಾಯಿಸಿದ್ದ ಎಂಬುದನ್ನು ಮನವರಿಕೆ ಮಾಡಿಕೊಟ್ಟರೆ, ರಾಯಚೂರಿನ ಆಯುಕ್ತರ ಮುಂದೆ ಸಲ್ಲಿಸಲಾದ ಕ್ಲೇಮು ಅರ್ಜಿಗಳು ಊರ್ಜಿತ ಯೋಗ್ಯವಾಗುತ್ತವೆ.

10. ಕ್ಲೇಮುದಾರರಿಗೆ ಪ್ರಯೋಜನ ಮತ್ತು ಸೌಲಭ್ಯ ಕಲ್ಪಿಸುವ ಸಲುವಾಗಿ 15.09.1995ರಿಂದ ಜಾರಿಗೆ ಬರುವಂತೆ 1995ರ ಅಧಿನಿಯಮ, 30ನ್ನು ತಿದ್ದುಪಡಿ ಮಾಡುವ ಮೂಲಕ ಅಧಿನಿಯಮದ ತಿದ್ದುಪಡಿ ಮಾಡಲಾದ 21ನೇ ಪ್ರಕರಣವನ್ನು ಅಧಿನಿಯಮದಲ್ಲಿ ವಿಶೇಷವಾಗಿ ಸೇರಿಸಿದೆ. ಅಧಿನಿಯಮದ ತಿದ್ದುಪಡಿಗೆ ಉದ್ದೇಶ ಮತ್ತು ಕಾರಣ ಹೇಳಿಕೆಗಳನ್ನು ಸ್ಪಷ್ಟವಾಗಿ ಸೂಚಿಸಿದ್ದು, ಕ್ಲೇಮುದಾರರ ಪ್ರಯೋಜನಕ್ಕಾಗಿ ಎಂದರೆ ಕಾರ್ಮಿಕರು ಅಥವಾ ಅವರ ಅವಲಂಬಿತರಿಗಾಗಿ ತಿದ್ದುಪಡಿ ಮಾಡಲಾಗಿದೆ ಎಂಬುದಾಗಿದೆ. ***ಮೋರ್ಗಿನಾ ಬೇಗಂ –ವಿರುದ್ಧ– ಎಂಡಿ. ಹನುಮಾನ್ ಪ್ಲಾಂಟೇಶನ್ ಲಿಮಿಟೆಡ್***[1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ 6 ಮತ್ತು 7ನೇ ಕಂಡಿಕೆಯಲ್ಲಿ ಉದ್ಧರಿಸಲಾದಂಥ ಉದ್ದೇಶ ಮತ್ತು ಕಾರಣಗಳ ಹೇಳಿಕೆಗಳ ವಿವರಣೆಯ ಸಂಬಂಧಪಟ್ಟ ಭಾಗವನ್ನು ಈ ಮುಂದೆ ಓದಲಾಗಿದೆ:

> *"ವಲಸೆ ಕಾರ್ಮಿಕರು, ಅಥವಾ ಅವರ ಅವಲಂಬಿತರು ಸಾಮಾನ್ಯವಾಗಿ ವಾಸಿಸುವ ಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿರುವ ಆಯುಕ್ತರ ಮುಂದೆ ನಷ್ಟಪರಿಹಾರ ಕ್ಲೇಮುಗಳನ್ನು ಸಲ್ಲಿಸಲು ಉಪಬಂಧವನ್ನು ಸೇರಿಸಲು ಸಹ ಪ್ರಸ್ತಾವಿಸಲಾಗಿದೆ. ಒಬ್ಬ ಆಯುಕ್ತರಿಂದ ಮತ್ತೊಬ್ಬ ಆಯುಕ್ತರಿಗೆ ನಷ್ಟ ಪರಿಹಾರವನ್ನು ವರ್ಗಾಯಿಸುವ ಉಪಬಂಧವನ್ನೂ ಸಹ ಮಾಡಲಾಗಿದೆ".*
>
> *7. ಈ ತಿದ್ದುಪಡಿಯುನ್ನು ಸೇರಿಸುವುದರ ಹಿಂದಿನ ಉದ್ದೇಶವೇನೆಂದರೆ, ದೇಶಾದ್ಯಂತ ಇರುವ ವಲಸೆ ಕಾರ್ಮಿಕರು ಜೀವನ ಸಾಗಿಸಲು ಎಲ್ಲಿಗಾದರೂ ಆಗಾಗ ಹೋಗುವರು*

1. ಸಿವಿಲ್ ಅಪೀಲು ಸಂಖ್ಯೆ: 4548/2007, ದಿನಾಂಕ 26-9-2007

*ಎಂಬುದಾಗಿದೆ. ಅಪಘಾತವು ನಡೆದಾಗ, ಕ್ಲೇಮುದಾರರು ಸೌಲಭ್ಯ ಪಡೆದುಕೊಳ್ಳುವ ಸಲುವಾಗಿ ಅವರು ತಮ್ಮ ಕ್ಲೇಮನ್ನು ಮಾಡಬಹುದು, ಅಪಘಾತ ನಡೆದ ಸ್ಥಳದಲ್ಲಿ, ಆ ಜಾಗದಲ್ಲಿ ವಾಸಿಸುವ ಅಗತ್ಯವಿಲ್ಲ. ಆದರೆ, ಅವರು ಅಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದಲ್ಲಿ ಆ ಸ್ಥಳದಲ್ಲಿರಬೇಕು. ಇದನ್ನು ಶ್ಲಾಘನೀಯ ಉದ್ದೇಶದೊಂದಿಗೆ ಮಾಡಲಾಗಿತ್ತು ಇಲ್ಲದಿದ್ದರೆ, ಅಧಿನಿಯಮದ ಮೇರೆಗೆ ನಷ್ಟಪರಿಹಾರವನ್ನು ಕ್ಲೇಮು ಮಾಡಲು ಕ್ಲೇಮುದಾರನಿಗೆ ಕಠಿಣವಾಗಿರುತ್ತಿತ್ತು. ದೇಶದ ಯಾವುದೋ ಒಂದು ಭಾಗದಲ್ಲಿ ವಾಸಿಸುವ ಹಾಗೂ ಜೀವನೋಪಾಯಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುವ ಬಡ ಕಾರ್ಮಿಕರು ಅಥವಾ ಅವರ ಅವಲಂಬಿತರು ಕ್ಲೇಮು ಅರ್ಜಿಯನ್ನು ಸಲ್ಲಿಸಲು ಅಪಘಾತ ನಡೆದ ಸ್ಥಳಕ್ಕೆ ಅಗತ್ಯವಾಗಿ ಹೋಗಲು ಸಾಧ್ಯವಾಗುವುದಿಲ್ಲ. ಆರ್ಥಿಕ ಮತ್ತು ಇತರ ಕಾಠಿಣ್ಯ ಪರಿಸ್ಥಿತಿಗಳಿಂದಾಗಿ ಅಂಥ ಕ್ಲೇಮು ಅರ್ಜಿಯನ್ನು ಬೆಂಬತ್ತಿ ಹೋಗಲು ಕ್ಲೇಮುದಾರರಿಗೆ ಅಪಾರ ಶ್ರಮವಾಗಬಹುದು. ಬಡ ಕ್ಲೇಮುದಾರರು ನಷ್ಟಪರಿಹಾರ ಪಡೆಯಲೋಸುಗ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆದಾಡುವಂತಾಗುತ್ತದೆ".*

11. ಆದರೆ, ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮದ 21(1)ನೇ ಪ್ರಕರಣದ ಮೊದಲ ಪರಂತುಕದ ಪ್ರಕಾರ, ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಕಾರ್ಮಿಕನು ತನಗೆ ಆದ ಗಾಯಗಳಿಗಾಗಿ ನಷ್ಟ ಪರಿಹಾರವನ್ನು ಕೋರಿ ಅಥವಾ ಕಾರ್ಮಿಕನು ಮೃತನಾಗಿದ್ದ ಸಂದರ್ಭದಲ್ಲಿ, ಯಾವ ಪ್ರದೇಶದಲ್ಲಿ ಅಪಘಾತ ನಡೆದಿದೆಯೋ ಆ ಪ್ರದೇಶದ ಅಧಿಕಾರ ವ್ಯಾಪ್ತಿ ಹೊಂದಿರುವ ಆಯುಕ್ತರನ್ನು ಹೊರತುಪಡಿಸಿದ ಆಯುಕ್ತರ ಮುಂದೆ ನಷ್ಟಪರಿಹಾರಕ್ಕಾಗಿ ಸಲ್ಲಿಸಿರುವ ಅವನ ಅವಲಂಬಿತನು ಕ್ಲೇಮು ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ, ಅಂಥ ಆಯುಕ್ತರು, ವಿಷಯವನ್ನು ಪರಿಶೀಲಿಸುವ ಮುನ್ನ ಅಥವಾ ವ್ಯವಹರಣೆಗಳನ್ನು

ಪ್ರಾರಂಭಿಸುವ ಮೊದಲು ಪ್ರದೇಶದ ಅಧಿಕಾರ ವ್ಯಾಪ್ತಿಹೊಂದಿರುವ ಕೇಂದ್ರ ಸರ್ಕಾರದ ಆಯುಕ್ತರು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರ ನಿಯಮಿಸಲಾದ ರೀತಿಯಲ್ಲಿ ನೋಟೀಸನ್ನು ನೀಡತಕ್ಕದ್ದು.

12. ಅಧಿನಿಯಮದ 21(1)ನೇ ಪ್ರಕರಣದ ಎರಡನೇ ಪರಂತುಕದ ಪ್ರಕಾರ ಕಾರ್ಮಿಕನು ಹಡಗಿನ ಮಾಸ್ಟರ್ ಅಥವಾ ನಾವಿಕ ಅಥವಾ ವಾಯುನೌಕೆಯ ಚಾಲಕ ಸದಸ್ಯ ಅಥವಾ ಮೋಟಾರು ವಾಹನ ಅಥವಾ ಕಂಪೆನಿಯ ಕಾರ್ಮಿಕನು ಭಾರತದ ಹೊರಗೆ ಅಪಘಾತಕ್ಕೊಳಗಾಗಿದ್ದಲ್ಲಿ ಅಂಥ ವಿಷಯವನ್ನು, ಹಡಗು, ವಾಯುನೌಕೆ ಅಥವಾ ಮೋಟಾರು ವಾಹನದ ಮಾಲೀಕನು ಯಾವ ಪ್ರದೇಶದಲ್ಲಿ ವಾಸವಾಗಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಕಂಪನಿಯ ನೋಂದಾಯಿತ ಕಚೇರಿ ಎಲ್ಲಿರುವುದೋ ಆ ಪ್ರದೇಶದ ಸಂದರ್ಭಾನುಸಾರ ಆಯುಕ್ತರ ಮೂಲಕ ಅಥವಾ ಅವರ ಮುಂದೆ ಇಡಬಹುದು.

13. ಪ್ರಸ್ತುತ ಪ್ರಕರಣದಲ್ಲಿ, ಒಪ್ಪಿಕೊಂಡಿರುವ ಹಾಗೆ, ಅಪಘಾತವು ಚಿತ್ರದುರ್ಗ ಜಿಲ್ಲೆಯಲ್ಲಿರುವ ಕುಂಚಗಾನಹಳ್ಳಿ ಗ್ರಾಮದಲ್ಲಿ ನಡೆದಿದೆ. ರಾಯಚೂರಿನ ಆಯುಕ್ತರ ಮುಂದೆ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸಿರುವ ಕ್ಲೇಮುದಾರರು ಅವರು, ರಾಯಚೂರಿನ ಆಯುಕ್ತರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವುದನ್ನಾಗಲಿ ಅಥವಾ ಲಾರಿಯ ಮಾಲೀಕನು ಎಂದರೆ ತಮ್ಮ ಉದ್ಯೋಗದಾತನು ಆಯುಕ್ತರು, ರಾಯಚೂರು ಜಿಲ್ಲೆ, ರಾಯಚೂರು ಇವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ನೋಂದಾಯಿತ ಕಚೇರಿ ಹೊಂದಿದ್ದನೆಂದಾಗಲಿ ವಾದಿಸಬೇಕು ಅಥವಾ ರುಜುವಾತುಪಡಿಸಬೇಕು.

14. ದುರಾದೃಷ್ಟವಶಾತ್, ಆಯುಕ್ತರು, ರಾಯಚೂರು ಇವರಿಗೆ ಅಧಿಕಾರ ವ್ಯಾಪ್ತಿಯು ಇಲ್ಲದಿರುವ ಸಂಬಂಧದ ಕಾರಣದಿಂದ ಕ್ಲೇಮುದಾರರು ಸಲ್ಲಿಸಿದ ಕ್ಲೇಮು ಅರ್ಜಿಗಳು ಈ ಸಂಬಂಧದಲ್ಲಿ ಕೈಗೆತ್ತಿಕೊಳ್ಳಲಾಗುವುದಿಲ್ಲವೆಂದು ಲಾರಿಯ ವಿಮಾಗಾರನು ತಮ್ಮ ಲಿಖಿತ ಹೇಳಿಕೆಯಲ್ಲಿ ನಿರ್ದಿಷ್ಟ ನಿಲುವನ್ನು ತಳೆದಿದ್ದರೂ ಕೂಡ, ರಾಯಚೂರಿನ ಆಯುಕ್ತರು, ಈ ಸಂಬಂಧ ಯಾವುದೇ ವಿವಾದಾಂಶವನ್ನು

ರೂಪಿಸಿರುವುದಿಲ್ಲ ಅಥವಾ ಕ್ಲೇಮು ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಾಗಿ ಅಭಿಪ್ರಾಯ ಕೂಡಾ ಪಟ್ಟಿರುವುದಿಲ್ಲ. ವಾಸ್ತವವಾಗಿ, ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ವಾದವನ್ನು ಪ್ರತಿವಾದಿಯು ಎತ್ತಿರುವಾಗ ಆ ಸಂಬಂಧದಲ್ಲಿ ವಿವಾದಾಂಶವನ್ನು ರೂಪಿಸಬೇಕಾಗುತ್ತದೆ ಮತ್ತು ಇದನ್ನು ಪ್ರಾರಂಭಿಕ ವಿವಾದಾಂಶವೆಂದು ಪರಿಗಣಿಸಬೇಕು.

15. ಅಲ್ಲದೆ, ಆಯುಕ್ತರು, ರಾಯಚೂರು ಇವರು, ಕ್ಲೇಮುದಾರರ ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಅಪಘಾತ ನಡೆದ ಅಧಿಕಾರ ವ್ಯಾಪ್ತಿ ಹೊಂದಿರುವ ಚಿತ್ರದುರ್ಗದ ಆಯುಕ್ತರಿಗೆ ಕೇಂದ್ರ ಸರ್ಕಾರ ಹಾಗೂ ಅಧಿನಿಯಮದ 21(1)ನೇ ಪ್ರಕರಣದ ಮೊದಲನೇ ಪರಂತುಕದ ಅಡಿಯಲ್ಲಿ ಉದ್ದೇಶಿಸಲಾದಂತೆ ರಾಜ್ಯ ಸರ್ಕಾರಕ್ಕೆ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ನೋಟೀಸನ್ನು ಹೊರಡಿಸಿದ್ದರೇ ಎಂಬುದಕ್ಕೆ ಸಂಬಂಧಿಸಿದಂತೆ ಪ್ರಶ್ನಿತ ತೀರ್ಪಿನಿಂದ ಏನೂ ಕಂಡು ಬರುವುದಿಲ್ಲ. ಆದ ಕಾರಣದಿಂದ ಯಾರ ಅಧಿಕಾರ ವ್ಯಾಪ್ತಿಯೊಳಗೆ ಅಪಘಾತ ನಡೆದಿದೆಯೋ ಆ ಆಯುಕ್ತರು ಮೊದಲನೆಯದಾಗಿ ಕ್ಲೇಮು ಅರ್ಜಿಯನ್ನು ಸ್ವೀಕರಿಸುವ ಅಧಿಕಾರ ವ್ಯಾಪ್ತಿಯನ್ನು ಉಳ್ಳವರಾಗಿರುತ್ತಾರೆ.

16. ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟ ವಿವಾದಾಂಶದ ಗೈರುಹಾಜರಿಯಲ್ಲಿ ಅದನ್ನು ಜಾರಿಗೊಳಿಸುವ ನಿರ್ಣಯ ನೀಡಿರುವುದರಿಂದ ಮತ್ತು ರಾಯಚೂರಿನ ಆಯುಕ್ತರು ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಅಪಘಾತ ನಡೆದ ಪ್ರದೇಶದ ಅಧಿಕಾರ ವ್ಯಾಪ್ತಿ ಹೊಂದಿರುವ ಚಿತ್ರದುರ್ಗದ ಆಯುಕ್ತರಿಗೆ ಮಾಹಿತಿ ಸಂಬಂಧಿ ನೋಟೀಸನ್ನು ಹೊರಡಿಸದೆ ಕಾರ್ಮಿಕ ನಷ್ಟಪರಿಹಾರ ಆಯುಕ್ತರು, ರಾಯಚೂರು ಇವರು ಕ್ಲೇಮು ಅರ್ಜಿಗೆ ನಷ್ಟ ಪರಿಹಾರವನ್ನು ನೀಡಿ ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪುಗಳನ್ನು ಕಾನೂನಿನಲ್ಲಿ ಸಮರ್ಥನೀಯವಲ್ಲ ಮತ್ತು ಮೇಲೆ ಹೇಳಲಾದ ಆಧಾರಗಳಿಂದಲೇ ಅವುಗಳನ್ನು ತಳ್ಳಿಹಾಕಬಹುದಾಗಿದೆ.

17. 1ನೇ ಸಂಖ್ಯೆ ಮತ್ತು 2ನೇ ಸಂಖ್ಯೆಯ ಕಾನೂನಿನ ಗಣನೀಯ ಪ್ರಶ್ನೆಗಳಿಗೆ ತದನುಸಾರವಾಗಿ ಉತ್ತರಿಸಲಾಗಿದೆ.

18. ವಿವಾದಾಂಶ ಸಂಖ್ಯೆ 1 ಮತ್ತು ವಿವಾದಾಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯುಕ್ತರು ಹೊರಡಿಸಿದ ತೀರ್ಪು ಮತ್ತು ಐತೀರ್ಪುಗಳನ್ನು ತಳ್ಳಿಹಾಕಬಹುದಾಗಿದೆ. ಆದುದರಿಂದ ಇತರ ಗಣನೀಯ ಪ್ರಶ್ನೆಗಳನ್ನು ಪ್ರಸ್ತಾವಿಸುವುದು ಅನಗತ್ಯವಾದುದಾಗಿದೆ.

19. ಈಗ, ಕಾರ್ಮಿಕರ ನಷ್ಟಪರಿಹಾರ ಅಧಿನಿಯಮ, 1923ರ (1923ರ ಕೇಂದ್ರ ಅಧಿನಿಯಮ 8) 20ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಎಲ್‌ಡಿ 159 ಎಲ್‌ಇಟಿ 2013 ದಿನಾಂಕ 23.01.2014ರ ಮೇರೆಗೆ ಅದರಲ್ಲಿ ನಿರ್ದಿಷ್ಟಪಡಿಸಲಾದ ಪ್ರಧಾನ/ಹೆಚ್ಚುವರಿ/ಹಿರಿಯ ಸಿವಿಲ್ ನ್ಯಾಯಾಧೀಶರನ್ನು ನಿರ್ದಿಷ್ಟಪಡಿಸಲಾದ ಪ್ರದೇಶಗಳೊಳಗೆ ಸದರಿ ಪ್ರಕರಣದ ಉದ್ದೇಶಗಳಿಗಾಗಿ 'ಕಾರ್ಮಿಕರ ನಷ್ಟಪರಿಹಾರ ಆಯುಕ್ತರು' ಎಂದು ನೇಮಕ ಮಾಡಲಾಗಿದೆ.

20. ವಿವಾದಾಂಶ ಸಂಖ್ಯೆ 1 ಮತ್ತು 2ಕ್ಕೆ ಸಂಬಂಧಿಸಿದಂತೆ ನನ್ನ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಅಪೀಲುಗಳನ್ನು ಅಂಗೀಕರಿಸುವುದು ಮತ್ತು ಆಯುಕ್ತರು ನೀಡಿದ ತೀರ್ಪು ಮತ್ತು ಐತೀರ್ಪನ್ನು ತಳ್ಳಿಹಾಕುವುದು ನ್ಯಾಯಯುತವಾದುದು ಮತ್ತು ಯುಕ್ತವಾದುದು ಮತ್ತು ಈಗ ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದಿರುವ ಹಾಗೂ ಆಯುಕ್ತರು, ರಾಯಚೂರು ಜಿಲ್ಲೆ, ರಾಯಚೂರು ಇವರ ಮುಂದೆ ಕ್ಲೇಮುದಾರರು ಸಲ್ಲಿಸಿದ ಕ್ಲೇಮು ಅರ್ಜಿಗಳನ್ನು ಕಾನೂನಿನಲ್ಲಿ ಸಮರ್ಥನೀಯವೆ ಮತ್ತು ಆಯುಕ್ತರು ರಾಯಚೂರು ಇವರು ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಅಪಘಾತ ನಡೆದ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಮಿಕ ಪರಿಹಾರ ನಿಧಿ ಆಯುಕ್ತರು, ಚಿತ್ರದುರ್ಗ ಇವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ನಿಯಮಿಸಲಾದ ರೀತಿಯಲ್ಲಿ ನೋಟೀಸನ್ನು ನೀಡಬೇಕಾಗಿತ್ತೇ ಎಂಬುದಕ್ಕೆ ಸಂಬಂಧಿಸಿದ ವಿವಾದಾಂಶವನ್ನು ರೂಪಿಸಲು ಅಧಿಕಾರ ವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರು ಇವರಿಗೆ ವಿಷಯವನ್ನು ಕಳುಹಿಸುವುದು. ವಿವಾದಾಂಶ ಸಂ.1, ಸಕಾರಾತ್ಮಕ ಮತ್ತು ವಿವಾದಾಂಶ ಸಂ.2 ನಕಾರಾತ್ಮಕ ಎಂದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಆಯುಕ್ತರು ಈಗಾಗಲೇ ರೂಪಿಸಲಾದಂಥ

ಇತರ ವಿಷಯಗಳ ಮೇಲೆ ಕ್ಲೇಮು ಅರ್ಜಿಗಳನ್ನು ಪರಿಶೀಲಿಸುವ ಮೊದಲು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಅಪಘಾತ ನಡೆದ ಅಧಿಕಾರ ವ್ಯಾಪ್ತಿಯಿರುವ ಚಿತ್ರದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ರಾಜ್ಯ ಸರ್ಕಾರಕ್ಕೆ ನೋಟೀಸನ್ನು ಹೊರಡಿಸುವುದು.

ಆದುದರಿಂದ ಈ ಮುಂದಿನವುಗಳು:

ಅಪೀಲುಗಳನ್ನು ಪುರಸ್ಕರಿಸಲಾಗಿದೆ. ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು ರಾಯಚೂರು ಜಿಲ್ಲೆ, ರಾಯಚೂರು ಇವರು ಡಬ್ಲ್ಯೂ.ಸಿ. ನಂ. 120/2006, 118/2006, 119/2006 ಮತ್ತು 121/2006ರಲ್ಲಿ ಹೊರಡಿಸಲಾದ ದಿನಾಂಕ 15.03.2007ರ ತೀರ್ಪು ಮತ್ತು ಐತೀರ್ಪುಗಳನ್ನು ತಳ್ಳಿಹಾಕಲಾಗಿದೆ.

ಇಲ್ಲಿ ಮೇಲೆ ಸೂಚಿಸಲಾದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗನುಸಾರವಾಗಿ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ನಂತರ ಹೊಸದಾಗಿ ಕ್ಲೇಮು ಅರ್ಜಿಗಳನ್ನು ನಿರ್ಧರಿಸಲು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜೆ.ಎಂ.ಎಫ್.ಸಿ. ರಾಯಚೂರು ಇವರಿಗೆ ವಿಷಯಗಳನ್ನು ರವಾನಿಸಲಾಗಿದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಯಚೂರು ಇವರು, ವಿಷಯಗಳು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲವೆಂದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಇವರು, ಅಧಿಕಾರ ವ್ಯಾಪ್ತಿಯ ಹಿರಿಯ ಸಿವಿಲ್ ನ್ಯಾಯಾಧೀಶರು ಲಿಂಗಸುಗೂರು ಇವರಿಗೆ ಇದನ್ನು ಕಳುಹಿಸಿಕೊಡಬೇಕು ಇವರು, ಇಲ್ಲಿ ಮೇಲೆ ಸೂಚಿಸಲಾದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗನುಸಾರವಾಗಿ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ನಂತರ ಕ್ಲೇಮು ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ವಿಲೇವಾರಿ ಮಾಡತಕ್ಕದ್ದು.

ಕ್ಲೇಮುದಾರರು ಮತ್ತು ವಿಮಾಗಾರರು ತಮ್ಮ ವಕೀಲರ ಮೂಲಕ ಈ ನ್ಯಾಯಾಲಯದ ಮುಂದೆ ಹಾಜರಾಗಿದ್ದರಿಂದ ಇವರು, ಯಾವುದೇ ನೋಟೀಸನ್ನು

ನಿರೀಕ್ಷಿಸದೆ, ದಿನಾಂಕ 11ನೇ ನವೆಂಬರ್ 2015ರಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜೆ.ಎಂ.ಎಫ್.ಸಿ ರಾಯಚೂರು ಇವರ ಮುಂದೆ ಹಾಜರಾಗಲು ಇವರಿಗೆ ಸೂಚಿಸಲಾಗಿದೆ ಮತ್ತು ಕ್ಲೇಮುದಾರರು ತಮ್ಮ ಉದ್ಯೋಗದಾತ / ಲಾರಿಯ ಮಾಲೀಕನು ನೋಟೀಸನ್ನು ಪಡೆದುಕೊಳ್ಳತಕ್ಕದ್ದು.

ಠೇವಣಿ ಮೊತ್ತವನ್ನು ಅಪೀಲುದಾರರಿಗೆ ಮರುಪಾವತಿಸಲು ಆದೇಶಿಸಲಾಗಿದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.